# ಭಾರತದ ಸಂವಿಧಾನ ಕಲಾ ಅನುಸಂಧಾನ

**ಭಾರತೀಯ ಸಂವಿಧಾನ ಸಂಪುಟ ಕೇವಲ ಅಕ್ಷರಗಳ ಹಿಂಡನ್ನಷ್ಟೇ ಒಳಗೊಂಡಿಲ್ಲ. ಸಂವಿಧಾನದಲ್ಲಿನ ಲಿಖಿತ ಬರಹಗಳಿಗೆ ಪೂರಕವಾಗಿ ದೇಶದ ಪರಂಪರೆ ಹಾಗೂ ಇತಿಹಾಸವನ್ನು ಬಿಂಬಿಸುವ ಕಲಾಕೃತಿಗಳೂ ಅದರಲ್ಲಿ ಬಳಕೆಯಾಗಿವೆ.**

■ ಜಗನ್ನಾಥ ಪ್ರಕಾಶ್ ಎನ್‌





ಭಾರತೀಯ ಸಂವಿಧಾನ ಎನ್ನುವುದು ಕಾನೂನು ವಿಧಿವಿಧಾನಗಳ ಲಿಖಿತ ನಿರೂಪಣೆಯ ಕೃತಿ ಮಾತ್ರವಲ್ಲ; ಅದೊಂದು ವರ್ಣಮಯ ಜಗತ್ತು. ಭಾರತೀಯ ಪರಂಪರೆ, ಇತಿಹಾಸದ ದರ್ಶನವನ್ನು ಬಿಂಬರೂಪದಲ್ಲಿ ಒಳಗೊಂಡಿರುವ ಮಹಾಕಾವ್ಯ. ಅಕ್ಷರರೂಪಿ ನೀತಿನಿರೂಪಣೆಗಳಿಗೆ ಪೂರಕವಾಗಿ ದೃಶ್ಯಕಲೆಯನ್ನೂ ಬಳಸಿಕೊಂಡಿರುವುದು ಸಂವಿಧಾನದ ಮೂಲ ಕೃತಿಗಳಿಗೆ ಕಲಾತ್ಮಕ ಮೌಲ್ಯ ತಂದುಕೊಟ್ಟಿದೆ.

ಪ್ರಥಮ ಸ್ವಾತಂತ್ರ್ಯ ಸಂಗ್ರಾಮ 1857ರಲ್ಲಿ ಶುರುವಾಗಿ, ದೇಶದುದ್ದಕ್ಕೂ ವಿವಿಧ ಮಜಲುಗಳಲ್ಲಿ ಹಬ್ಬಿತಷ್ಟೇ. ಆ ಕಾವು ನಿರಂತರವಾಗಿ ಮುಂದುವರೆದು, 1930ರ ಜನವರಿ 26ರಂದು 'ಪೂರ್ಣ ಸ್ವರಾಜ್ಯ' ಬೇಕೆಂಬ ಒತ್ತಾಯ ರೂಪುಗೊಂಡಿತು. ಆ ದಿನದ ನೆನಪಿನಲ್ಲೇ, 1950ರ ಜನವರಿ 26ರಂದು 'ಭಾರತ ಸಂವಿಧಾನ' ಜಾರಿಗೊಂಡಿತು.

ಭಾರತದ ಸಂವಿಧಾನ ಮೊದಲು ಮುದ್ರಣಗೊಳ್ಳಲಿಲ್ಲ ಎಂಬುದು ವಿಶೇಷ. ಅದು ಲಿಖಿತ ದಾಖಲೆ. ನಮ್ಮ ಸಂವಿಧಾನದ ಮೊದಲೆರಡು ಪ್ರತಿಗಳು ರೂಪುಗೊಂಡಿದ್ದು ಕೈಬರಹದಿಂದ.

ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಭರವಸೆ ಇಂಗ್ಲೆಂಡ್‌ನಿಂದ ಸಿಕ್ಕಿದ್ದು 1946ರ ಸುಮಾರಿಗೆ. ಸ್ವತಂತ್ರ ರಾಷ್ಟ್ರಕ್ಕೆ ಸ್ವತಂತ್ರ ಸಂವಿಧಾನ ರಚಿಸಲು ಹಸಿರುನಿಶಾನೆ ದೊರೆತಿದ್ದೂ ಆಗಲೇ. ಅದಕ್ಕೆ ಹಿನ್ನೆಲೆಯಾಗಿ ಚುನಾವಣೆಗಳೂ ನಡೆದವು. ಆಗ ಅಸ್ತಿತ್ವಕ್ಕೆ ಬಂದಿದ್ದೇ 'ಸಂವಿಧಾನ ಸಭೆ'. ದೇಶದ ಎಲ್ಲಾ ಸ್ತರಗಳನ್ನೂ ಪ್ರತಿನಿಧಿಸುವ ಜನರಿದ್ದ ಸಂವಿಧಾನ ಸಭೆಯ ಅಧ್ಯಕ್ಷರಾಗಿ ಬಾಬು ರಾಜೇಂದ್ರ ಪ್ರಸಾದ್ ಆಯ್ಕೆಯಾದವರು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು 'ಸಂವಿಧಾನ ಕರಡು ರಚನಾ ಸಮಿತಿ' ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ಅದೇ ಸಂದರ್ಭದಲ್ಲಿ.

ಮೊದಲ ಸಂವಿಧಾನ ರಚನಾ ಸಭೆಯು ಶುರುವಾಗಿದ್ದು 1946ರ ಡಿಸೆಂಬರ್ 6ರಂದು. ಒಂದು ವರ್ಷ ಎರಡು ತಿಂಗಳ ಅವಧಿಯಲ್ಲಿ ಸಂವಿಧಾನದ ಮೊದಲ ಕರಡು ಸಿದ್ಧಗೊಂಡು, 'ಸಂವಿಧಾನ ಸಭೆ'ಯ ಮೂಲಕ ಜನತೆಯ ಮುಂದೆ ಬಂದಿದ್ದು 1948ರ ಫೆಬ್ರುವರಿ 21ರಂದು. ಕರಡಿನ ಮೇಲೆ ಸುದೀರ್ಘ ಚರ್ಚೆ ನಡೆಯಿತು. ಅದಕ್ಕೆ ಬಂದ ತಿದ್ದುಪಡಿಗಳ ಸಂಖ್ಯೆ 7635. ಅವನ್ನೆಲ್ಲ ಪರಿಶೀಲಿಸಿ, ಅನಗತ್ಯವೆನಿಸಿದ್ದನ್ನು ಕೈಬಿಟ್ಟು, ಸೂಕ್ತವಾದುದನ್ನು ಒಪ್ಪಿಕೊಂಡ ಬಳಿಕ ಸಿದ್ಧಗೊಂಡ ಅಂತಿಮ ಕರಡನ್ನು, 1949ರ ನ. 26ರಂದು ಭಾರತ ಸರ್ಕಾರಕ್ಕೆ ಸಲ್ಲಿಸಲಾಯಿತು.

ಏಳು ಮಂದಿ ಇದ್ದ ಸಂವಿಧಾನ ಕರಡು ಸಮಿತಿಯಲ್ಲಿ ಉಂಟಾದ ಎರಡುತೊಡರುಗಳ ನಡುವೆ ಬಾಬಾ ಸಾಹೇಬರ ನೇತೃತ್ವದಲ್ಲಿ, ಎರಡು ವರ್ಷ 11 ತಿಂಗಳು 17 ದಿನಗಳಷ್ಟು ಸುದೀರ್ಘ ಅವಧಿಯಲ್ಲಿ ವಿಶ್ವದ ಅತಿ ದೊಡ್ಡ ಲಿಖಿತ ಸಂವಿಧಾನ ರಚನೆಗೊಂಡಿತು. ಒಟ್ಟು 365 ವಿಧಿಗಳ, 25 ಪ್ರತ್ಯೇಕ ಭಾಗಗಳಲ್ಲಿ ರೂಪಿತವಾದ ಸಂವಿಧಾನ ಸಂಪುಟದಲ್ಲಿ, ದೇಶದ ಚರಿತ್ರೆಯ ಅಪೂರ್ವ ಬಿಂಬಗಳಿಗೆ ಅವಕಾಶ ಇರಬೇಕೆನ್ನುವುದು



ಸಂವಿಧಾನದ ಮೂಲ ಸಂಪುಟಗಳಿಗೆ ಕಲಾತ್ಮಕ ಸ್ಪರ್ಶ ನೀಡಿದ ನಂದಲಾಲ್ ಬೋಸ್



ಸಂವಿಧಾನದ ಮೂಲಕೃತಿಯಲ್ಲಿ ಬಳಕೆಯಾಗಿರುವ ಮಧುಬನಿ ಕಲಾಕೃತಿ